C.R.P.67

Form No.4 (Civil)
Deposition Sheets
(R.P.No.57)

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್.ಸಿ. ಸಂಖ್ಯೆ:101/2023 C/w 113/2023**

ಪ್ರಾಸಾ. 25 ಚಾಸಾ. 32

| | |
|---|---|
| ಸಾಕ್ಷಿದಾರರ ಹೆಸರು | ಎಸ್ ರಮೇಶ್ |
| ತಂದೆಯ ಹೆಸರು | ಸಿದ್ದಲಿಂಗೇಗೌಡ |
| ವಯಸ್ಸು | 64 ವರ್ಷಗಳು |
| ಉದ್ಯೋಗ | ನಿವೃತ್ತ ಅಧೀಕ್ಷಕರು,<br>ಭಾರತೀ ಕಾಲೇಜು. |
| ವಾಸ | ಕೆ ಎಂ ದೊಡ್ಡಿ |

**ಸಾಕ್ಷಿಯನ್ನು ದಿನಾಂಕ:24.01.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ಈಗ ತೋರಿಸಿದ ನಿಪಿ-40 ನೋಟೀಸಿನಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ-40(ಬಿ) ಎಂದು ಗುರುತಿಸಲಾಯಿತು.

2. ಸುಮಾರು 3 ವರ್ಷಗಳ ಹಿಂದೆ ಅಂದರೆ 2022 ರಂದು ನಾನು ಕೆ.ಎಂ. ದೊಡ್ಡಿ ಪೊಲೀಸ್ ಠಾಣೆಗೆ ನನ್ನ ವೈಯಕ್ತಿಕ ಕೆಲಸ ವಿಚಾರವಾಗಿ ಹೋಗಿದ್ದಾಗ ಪೊಲೀಸರು ಮೇಲೆ ಹೇಳಿದ ದಾಖಲೆ ಹಾಗೂ ಈಗ ತೋರಿಸಿದ ದಾಖಲೆ ನಿಪಿ-41 ಮಹಜರ್ ಗೆ ನನ್ನ ಸಹಿ ಪಡೆದಿರುತ್ತಾರೆ. ನಿಪಿ-41 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-41(ಬಿ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ನ್ಯಾಯಾಲಯದ ಮುಂದೆ ಇರುವ ಯಾವುದೇ ಆರೋಪಿತರನ್ನು ನಾನು ನೋಡಿರುವುದಿಲ್ಲ. 1ನೇ ಆರೋಪಿಯನ್ನು ನೋಡುತ್ತಿದ್ದು, ಆತ ಆ

ದಿನ ಪೊಲೀಸ್ ಠಾಣೆಯಲ್ಲಿರಲಿಲ್ಲ. ನನ್ನ ಮುಂದೆ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಪೊಲೀಸರು ಕೇವಲ ನನ್ನ ಸಹಿ ಪಡೆದಿರುತ್ತಾರೆ. ಉಳಿದ ಯಾವುದೇ ವಿಚಾರ ನನಗೆ ತಿಳಿದಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ತಿಳಿದಿರುವುದಿಲ್ಲ.

3. ನಿಪಿ-42 ರ ಲಕೋಟೆಯ ಮೇಲೆ ಅಂಟಿಸಿರುವ ಚೀಟಿಯ ಮೇಲೂ ಸಹ ನನ್ನ ಸಹಿ ಇರುತ್ತದೆ. ಆದರೆ ಯಾವ ವಿಚಾರವಾಗಿ ನನ್ನ ಸಹಿ ಪಡೆದರು ಎಂದು ನನಗೆ ಗೊತ್ತಿಲ್ಲ. ಈಗ ತೋರಿಸಿದಂತಹ ನಿಪಿ-42 ಮೆಮೋರಿ ಕಾರ್ಡನ್ನು ನನ್ನ ಮುಂದೆ ಸಂಗ್ರಹಿಸಿರುವುದಿಲ್ಲ ಮತ್ತು ಈ ಹಿಂದೆ ನಾನು ನೋಡಿರುವುದಿಲ್ಲ. ನನ್ನ ಮುಂದೆ ಯಾವುದೇ ಧ್ವನಿ ಸಂಗ್ರಹಿಸಿರುವುದಿಲ್ಲ.

> (ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ದಿನಾಂಕಃ26.12.2022 ರಂದು ಪೊಲೀಸರು ನನಗೆ ಪ್ರಕರಣಕ್ಕೆ ಸಂಬಂಧಪಟ್ಟಂತೆ 1 ನೇ ಆರೋಪಿಯಾದ ದೊಡ್ಡಯ್ಯರವರ ವಾಯ್ಸ್ ಸ್ಯಾಂಪಲ್ ತೆಗೆದುಕೊಳ್ಳಬೇಕು ಮತ್ತು ಮಹಜರ್ ಮಾಡಬೇಕು ಎಂದು ಆ ಸಮಯದಲ್ಲಿ ಹಾಜರಿರಬೇಕೆಂದು ನಿಪಿ-40 ರಂತೆ ನೋಟೀಸ್ ನೀಡಿದಾಗ ನಾನು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

2. ನಂತರ ಪೊಲೀಸ್ ಠಾಣೆಯಲ್ಲಿ ಮಧ್ಯಾಹ್ನ 12.30 ಸಮಯದಲ್ಲಿ 1 ನೇ ಆರೋಪಿ ಇದ್ದು, ಸಿ.ಡಬ್ಲ್ಯು-49 ರವರು ಓಪೋ ಎ 1 ಕೆ ಮೊಬೈಲಿಗೆ ಈಗ ತೋರಿಸಿದ 8 ಜಿಬಿ ಮೆಮೋರಿ ಕಾರ್ಡನ್ನು ಅಳವಡಿಸಿ, ನಂತರ 1 ನೇ ಆರೋಪಿಯಾದ ವಾಯ್ಸ್ ರೆಕಾರ್ಡಿಂಗ್ ಪಡೆಯಲಾಯಿತು. ಆತನ ಧ್ವನಿಯನ್ನು ಮೂರು ಸುತ್ತಿನಲ್ಲಿ ಕನ್ನಡ ಸಂಭಾಷಣೆಯಲ್ಲಿ ನನ್ನ ಸಮಕ್ಷಮ ಪಡೆಯಲಾಯಿತು ಎಂದರೆ ಸರಿಯಲ್ಲ. ಈಗ ತೋರಿಸಿದಂತಹ 8 ಜಿಬಿ ಮೆಮೋರಿ ಕಾರ್ಡ್ ನಲ್ಲಿ 1 ನೇ ಆರೋಪಿಯ ವಾಯ್ಸನ್ನು ರೆಕಾರ್ಡ್ ಮಾಡಲಾಯಿತು. ನತಂರ ಸದರಿ ಕಾರ್ಡನ್ನು ನಮ್ಮ ಸಮಕ್ಷಮ ಬಿಳಿ ಬಟ್ಟೆಯಲ್ಲಿ ಹಾಕಿ ಮೊಹರು ಮಾಡಿಕೊಂಡರು ಎಂದರೆ

ಸರಿಯಲ್ಲ. ಆ ಸಮಯದಲ್ಲಿ ನನ್ನ ಜೊತೆ ಚಾಸಾ-38 ರವರೂ ಸಹ ಹಾಜರಿದ್ದು, ಸಹಿ ಮಾಡಿದರು ಎಂದರೆ ಸರಿಯಲ್ಲ.

3. ಮಧ್ಯಾಹ್ನ 12.30 ರಿಂದ 1.30 ರವರೆಗೆ ನಮ್ಮ ಸಮಕ್ಷಮ ಕಂಪ್ಯೂಟರ್ ನಲ್ಲಿ ಪ್ರಿಂಟ್ ತೆಗೆಯಲಾಯಿತು ಎಂರೆ ಸರಿಯಲ್ಲ. ನಾವು ಸದರಿ ಮಹಜರಿನಲ್ಲಿ ಬರೆದಿರುವ ವಿಚಾರವನ್ನು ತಿಳಿದು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-42 ರಲ್ಲಿ 1 ನೇ ಆರೋಪಿಯ ಮಾದರಿ ವಾಯ್ಸ್ ಸಂಗ್ರಹಿಸಿರುವುದು ಗೊತ್ತಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಆರೋಪಿತರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.